# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1682 |
| ಸದಸ್ಯರ ಹೆಸರು | : | ಶ್ರೀ ಹೆಚ್. ಎಂ. ರಮೇಶಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 14-03-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೈತರಿಗೆ ವಿದ್ಯುತ್ ಪರಿವರ್ತಕ ವಿತರಿಸಿ (ಟಿ.ಸಿ.) ಶೀಘ್ರ ಸಂಪರ್ಕ ನೀಡುವಲ್ಲಿ ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿನ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಸರ್ಕಾರಿ ಸುತ್ತೋಲೆ ಸಂಖ್ಯೆ ಇಎನ್/41/ ಪಿಎಸ್‌ಸಿ/2014 ದಿನಾಂಕ 14-07-2014 ರ ಸರ್ಕಾರದ ಆದೇಶದ ಪ್ರಕಾರ ಶೀಘ್ರ ಸಂಪರ್ಕ ಯೋಜನೆಯಡಿ ಸಂಪರ್ಕ ಕಲ್ಪಿಸಲು ಮೂಲಭೂತ ಸೌಕರ್ಯ ಶುಲ್ಕ ರೂ.10,000/- ಗಳ ಜೊತೆಗೆ ಠೇವಣಿ ಹಣವನ್ನು ಪಾವತಿಸಿದ ರೈತರು ಸ್ವಯಂ ನಿರ್ವಹಣಾ ಯೋಜನೆಯಡಿ ಮೂಲಭೂತ ಸೌಕರ್ಯವನ್ನು ಕಲ್ಪಿಸಿಕೊಂಡಲ್ಲಿ ಅಗತ್ಯವಿರುವಲ್ಲಿ ಲಭ್ಯತೆ ಮತ್ತು ಆದ್ಯತೆ ಮೇರೆಗೆ ಪರಿವರ್ತಕಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ಶೀಘ್ರ ಸಂಪರ್ಕ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಕಂಪನಿವಾರು ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.<br><br>ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಶೀಘ್ರ ಸಂಪರ್ಕ ಯೋಜನೆಯಡಿಯಲ್ಲಿ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲು ಅಧಿಕಾರಿಗಳು ವಿಳಂಬ ಧೋರಣೆ ಮಾಡುತ್ತಿರುವುದಿಲ್ಲ.<br><br>ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಅವಶ್ಯಕತೆಯಿರುವೆಡೆಯಲ್ಲಿ ಪರಿವರ್ತಕಗಳನ್ನು ಅಳವಡಿಸಲು ರೈತರಿಂದ ಯಾವುದೇ ಶುಲ್ಕವನ್ನು ವಿದ್ಯುತ್ ಸರಬರಾಜು ಕಂಪನಿಗಳು ತೆಗೆದುಕೊಳ್ಳುತ್ತಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ರೈತರು ತತ್ಕಾಲ್ ಯೋಜನೆ ಅಡಿ ವಿದ್ಯುತ್ ಪರಿವರ್ತಕ ಪಡೆಯಲು ಹಣ ಕಟ್ಟಿದ್ದು, ಲಕ್ಷಾಂತರ ರೂಪಾಯಿ ಕಂಬ ಮತ್ತು ತಂತಿ ಅಳವಡಿಸಿಕೊಂಡು ವರ್ಷಗಳಿಂದ ಕಾಯುತ್ತಿದ್ದು, ವಿದ್ಯುತ್ ಪರಿವರ್ತಕಗಳನ್ನು ಈವರೆವಿಗೂ ವಿತರಿಸಿರುವುದಿಲ್ಲವಾದ್ದರಿಂದ ವಿದ್ಯುತ್ ಪರಿವರ್ತಕಗಳನ್ನು ಯಾವ ಕಾಲಮಿತಿಯಲ್ಲಿ ಅಳವಡಿಸಲಾಗುವುದು; ವಿದ್ಯುತ್ ಪರಿವರ್ತಕಗಳನ್ನು ಅಳವಡಿಸುವಲ್ಲಿ ವಿಳಂಬ ದೋರಣೆ ಅನುಸರಿಸುತ್ತಿರುವ ಅಧಿಕಾರಿಗಳ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು; | |
| ಇ) | ಯಾವುದೇ ಯೋಜನೆಯ ವಿದ್ಯುತ್ ಪರಿವರ್ತಕಗಳು ಸುಟ್ಟು ಹೋದರೆ, ಬದಲಿಸಲು ಮತ್ತು ಅಳವಡಿಸಲು ಕೆಳಹಂತದ ಸಿಬ್ಬಂದಿಯಿಂದ ಶೋಷಣೆಯಾಗುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದಿದ್ದು, ಗ್ರಾಮೀಣ ಪ್ರದೇಶದಲ್ಲಿ ತಂತಿ ಮಾರ್ಗ ಬದಲಿಸುವ ವಿಚಾರದಲ್ಲಿ ರೈತರಿಂದ ಸುಲಿಗೆಯಾಗುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; ಕೈಗೊಂಡಿದ್ದ ಇಂತಹ ಅಧಿಕಾರಿಗಳು/ಸಿಬ್ಬಂದಿಯ ವಿರುದ್ಧ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ? | ವಿಫಲವಾದ ವಿದ್ಯುತ್ ಪರಿವರ್ತಕಗಳನ್ನು ಬದಲಾಯಿಸಲು ಹಾಗೂ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಮಾರ್ಗಗಳನ್ನು ಬದಲಿಸುವ ಬಗ್ಗೆ ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿಯಿಂದ ಶೋಷಣೆಯಾಗುತ್ತಿರುವ ಬಗ್ಗೆ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ. ಅಂತಹ ಯಾವುದಾದರು ದೂರುಗಳು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಇಎನ್ 68 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತ ಸಚಿವರು

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಹೆಚ್. ಎಂ. ರಮೇಶಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1682**ಕ್ಕೆ ಅನುಬಂಧ:-

**2014 ರಿಂದ ಫೆಬ್ರವರಿ 2022ರ ಅಂತ್ಯದವರೆಗೆ ಶೀಘ್ರ ಸಂಪರ್ಕ ಯೋಜನೆಯಡಿ ವಿದ್ಯುದೀಕರಣಗೊಂಡ, ವಿದ್ಯುದೀಕರಣಗೊಳಿಸಲು ಬಾಕಿ ಇರುವ ನೀರಾವರಿ ಪಂಪ್‌ಸೆಟ್‌ಗಳ ವಿವರಗಳು:**

| ವಿದ್ಯುತ್ ಸರಬರಾಜು ಕಂಪನಿ ಹೆಸರು | ಶೀಘ್ರ ಸಂಪರ್ಕ ಯೋಜನೆಯಡಿ ನೋಂದಣಿಗೊಂಡ ಅರ್ಜಿಗಳ ಸಂಖ್ಯೆ | ಮೂಲಭೂತ ಸೌಕರ್ಯ ಶುಲ್ಕ ರೂ.10000/- & ಇತರೆ ಠೇವಣಿಗಳನ್ನು ಪಾವತಿಸಿರುವ ಅರ್ಜಿಗಳ ಸಂಖ್ಯೆ | ಅರ್ಜಿದಾರರಿಂದ ಮೂಲಭೂತ ಸೌಕರ್ಯ ಕಲ್ಪಿಸಿಕೊಂಡ ಅರ್ಜಿಗಳ ಸಂಖ್ಯೆ | ವಿದ್ಯುತ್ ಸಂಪರ್ಕಗೊಂಡ ಅರ್ಜಿಗಳ ಸಂಖ್ಯೆ | ಅಳವಡಿಸಲಾದ ಪರಿವರ್ತಕಗಳ ಸಂಖ್ಯೆ | ಎಸ್ಕಾಂಗಳಿಂದ ಪರಿವರ್ತಕಗಳನ್ನು ಸರಬರಾಜು ಮಾಡಲು ಬಾಕಿ ಇರುವ ಅರ್ಜಿಗಳ ಸಂಖ್ಯೆ | ಅರ್ಜಿದಾರರಿಂದ ಮೂಲಭೂತ ಸೌಕರ್ಯ ಕಲ್ಪಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|---|---|---|
| ಬೆಸ್ಕಾಂ | 26085 | 26010 | 23829 | 22119 | 22119 | 1710 | 2181 |
| ಮೆಸ್ಕಾಂ | 6200 | 6065 | 6023 | 6007 | 3026 | 16 | 42 |
| ಸೆಸ್ಕ್ | 9085 | 9085 | 9085 | 9029 | 5124 | 39 | 0 |
| ಹೆಸ್ಕಾಂ | 20365 | 19392 | 17941 | 16113 | 15918 | 1828 | 1451 |
| ಜೆಸ್ಕಾಂ | 2977 | 2486 | 1781 | 1781 | 629 | 0 | 705 |
| **ಒಟ್ಟು** | **64712** | **63038** | **58659** | **55049** | **46816** | **3593** | **4379** |